## ಕರ್ನಾಟಕ ಸರ್ಕಾರದ ನಡವಳಿಗಳು.

563

ವಿಷಯ:- ಬಿಜಾಪೂರ ಜಿಲ್ಲೆಯ ಸಿಂದಗಿ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಳಪೆ ಕಾಮಗಾರಿ ಕೈಗೊಂಡ ಶ್ರೀ ಬಿ.ಬಿ. ಕೌಲಗಿ, ಸಹಾಯಕ ಕೃಷಿ ಅಧಿಕಾರಿ –ಶಿಸ್ತು ಕ್ರಮ.

**ಓದಲಾಗಿದೆ:-**

1) ಸರ್ಕಾರದ ಕಾರಣ ಕೇಳುವ ಸೂಚನಾ ಪತ್ರ ಸಂ. ಕೃತೋಇ 25 ಕೃಪವಿ 2008 ದಿನಾಂಕ:06-05-2008.
2) ಸರ್ಕಾರದ ಆದೇಶ ಸಂ. ಕೃತೋಇ 25 ಕೃಪವಿ 2008, ದಿನಾಂಕ: 22-01-2009.
3) ಸರ್ಕಾರದ ಆದೇಶ ಸಂ. ಕೃತೋಇ 25 ಕೃಪವಿ 2008, ದಿನಾಂಕ: 27-05-2009.
4) ಸರ್ಕಾರದ ಆದೇಶ ಸಂ. ಕೃತೋಇ 25 ಕೃಪವಿ 2008, ದಿನಾಂಕ: 24-08-2009.
5) ವಿಚಾರಣಾಧಿಕಾರಿಗಳ ವಿಚಾರಣಾ ವರದಿ ನೀಡಿದ ದಿನಾಂಕ: 18-07-2011.
6)

**ಪ್ರಸ್ತಾವನೆ:-**

ಶ್ರೀ. ಬಿ.ಬಿ. ಕೌಲಗಿ, ಸಹಾಯಕ ಕೃಷಿ ಅಧಿಕಾರಿ ಇವರು 2006-07ನೇ ಸಾಲಿನಲ್ಲಿ ಬಿಜಾಪೂರ ಜಿಲ್ಲೆಯ ಜಲಾನಯನ ಅಭಿವೃದ್ಧಿ ಇಲಾಖೆಯ ಸಿಂದಗಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಂಪೂರ್ಣ ಗ್ರಾಮೀಣ ರೋಜಗಾರ ಯೋಜನೆ ವಿಶೇಷ ಘಟಕದಡಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ವಿವಿಧ ಯೋಜನೆಯಡಿ 800 ಮೆಟ್ರಿಕ್ ಟನ್ ಆಹಾರ ಧಾನ್ಯ ಮತ್ತು ನಗದು ಹಣ ಪಡೆದುಕೊಂಡು, ಸದರಿ ಆಹಾರ ಧಾನ್ಯಗಳನ್ನು ಕಾಮಗಾರಿಗಳ ಕೆಲಸಕ್ಕೆ ಉಪಯೋಗಿಸಿಕೊಂಡಿರುವುದಕ್ಕೆ ಯಾವುದೇ ಲೆಕ್ಕಪತ್ರಗಳನ್ನು ಸಲ್ಲಿಸದೇ ಸರ್ಕಾರಿ ಹಣ ದುರುಪಯೋಗ ಮಾಡಿಕೊಂಡಿದ್ದಾರೆಂಬ ಆಪಾದನೆಗೆ ಸಂಬಂದಿಸಿದಂತೆ ಅವರ ಮೇಲೆ ಕ್ರ.ಸಂ.1ರಲ್ಲಿ ಓದಲಾದ ಸರ್ಕಾರದ ಕಾರಣ ಕೇಳುವ ಪತ್ರದೊಂದಿಗೆ ಸಿ.ಸಿ.ಎ ನಿಯಮಗಳಡಿ ಆಪಾದನಾ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

ಶ್ರೀ ಬಿ.ಬಿ.ಕೌಲಗಿರವರು ತಮಗೆ ಜಾರಿ ಮಾಡಿದ ಕಾರಣ ಕೇಳುವ ಪತ್ರವನ್ನು ಸ್ವೀಕರಿಸಿ ನಿಗಧಿತ ಅವಧಿಯೊಳಗೆ ತಮ್ಮ ಮೇಲಿರುವ ಆರೋಪಗಳ ಬಗ್ಗೆ ಯಾವುದೇ ಲಿಖಿತ ಹೇಳಿಕೆ ನೀಡದೇ ಇದ್ದ ಪ್ರಯುಕ್ತ ಸದರಿ ಪ್ರಕರಣದಲ್ಲಿ ಸತ್ಯಾ-ಸತ್ಯಾತೆಯನ್ನು ತಿಳಿದುಕೊಳ್ಳುವ ಸಲುವಾಗಿ ಶ್ರೀ ಎಸ್.ಎಸ್. ಪಾಟೀಲ್, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯಾಗಿ ಮತ್ತು ತಾಂತ್ರಿಕ ಸಹಾಯಕರು ಜಿಲ್ಲಾ ಜಲಾನಯನ ಅಭಿವೃದ್ಧಿ

19

ಅಧಿಕಾರಿಯವರ ಕಚೇರಿ, ಬಿಜಾಪೂರ ಇವರನ್ನು ಮಂಡನಾಧಿಕಾರಿಯವರನ್ನಾಗಿ ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ನೇಮಿಸಲಾಗಿತ್ತು.

ಮೇಲೆ ಕ್ರ.ಸಂ.(3)ರಲ್ಲಿ ಓದಲಾದ ಪತ್ರದಲ್ಲಿ ಶ್ರಿ ಎಸ್. ಎಸ್. ಪಾಟೀಲ್, ಜಿಲ್ಲಾ ಮತ್ತು ಸೇಶನ್ಸ ನ್ಯಾಯಾಧೀಶರು, ಇವರು ತಮ್ಮ ವೈಯಕ್ತಿಕ ಹಾಗೂ ಆರೋಗ್ಯ ಸರಿಯಿಲ್ಲದ ಕಾರಣ ಸದರಿ ಪ್ರಕರಣದ ವಿಚಾರಣೆಯನ್ನು ನಡೆಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದರ ಮೇರೆಗೆ ಮೇಲೆ ಕ್ರ.ಸಂ.(4)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಪಲ್ಲೇದ, ನಿವೃತ್ತ ಜಿಲ್ಲಾ ನ್ಯಾಯಾಧೀಶರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು ಆದರೆ ಅವರು ಸಹ ತಾವು ಗದಗ ಜಿಲ್ಲಾ ಗ್ರಾಹಕರ ವೇದಿಕೆ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರಿಂದ ಈ ಪ್ರಕರಣದಲ್ಲಿ ವಿಚಾರಣೆ ಪ್ರಕ್ರೀಯೆ ಪ್ರಾರಂಭ ಮಾಡಲು ಸಾಧ್ಯವಾಗಲಿಲ್ಲವೆಂದು. ಆದ್ದರಿಂದ ಈ ಪ್ರಕರಣದಲ್ಲಿ ಬೇರೊಬ್ಬ ವಿಚಾರಣಾಧಿಕಾರಿಯವರನ್ನು ನೇಮಿಸಬೇಕೆಂದು ಸರ್ಕಾರಕ್ಕೆ ಪತ್ರ ಬರೆದ ಪ್ರಯುಕ್ತ ಸದರಿಯವರ ಸ್ಥಾನದಲ್ಲಿ ಶ್ರೀ ಡಿ.ವಿ.ಶೇಠ್, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯವರನ್ನಾಗಿ ನೇಮಿಸಿ ಆದೇಶಿಸಲಾಯಿತು.

ಅದರಂತೆ, ಶ್ರೀ ಡಿ.ವಿ. ಶೇಠ್, ನಿವೃತ್ತ ಜಿಲ್ಲಾ ಮತ್ತು ಸೇಶನ್ಸ್ ನ್ಯಾಯಾಧೀಶರು, ಈ ಪ್ರಕರಣದಲ್ಲಿ ಕೂಲಂಕುಷವಾಗಿ ವಿಚಾರಣೆ ನಡೆಸಿ, ಮೇಲೆ ಕ್ರ.ಸಂ.(3)ರಲ್ಲಿ ಓದಲಾದ ಪತ್ರದಲ್ಲಿ ವರದಿಯನ್ನು ನೀಡಿರುತ್ತಾರೆ.

<u>ಶ್ರೀ ಬಿ.ಬಿ. ಕೌಲಗಿ, ಸಹಾಯಕ ಕೃಷಿ ಅಧಿಕಾರಿಯವರ ಮೇಲಿನ ಆರೋಪಗಳು ಈ ಕೆಳಕಂಡಂತ್ತಿರುತ್ತವೆ.</u>

1) ಶ್ರೀ ಬಿ.ಬಿ. ಕೌಲಗಿ, ಸಹಾಯಕ ಕೃಷಿ ಅಧಿಕಾರಿಯವರ ಮೇಲಿರುವ ಮೊದಲನೆ ಆರೋಪವೆನೆಂದರೆ, 2006-07ನೇ ಸಾಲಿನಲ್ಲಿ ಸಂಪೂರ್ಣ ಗ್ರಾಮೀಣ ರೋಜಗಾರ ಯೋಜನೆಯಡಿ. 800 ಮೆಟ್ರಿಕ್ ಟನ್ ಆಹಾರ ಧಾನ್ಯಗಳನ್ನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಪಡೆದುಕೊಂಡು, ಸದರಿ ಆಹಾರ ಧಾನ್ಯಗಳನ್ನು ಕಾಮಗಾರಿಗಳಿಗೆ ಉಪಯೋಗಿಸಿದ ಬಗ್ಗೆ ಯಾವುದೇ ದಾಖಲೆಗಳನ್ನು ನೀಡದೆ ಇದ್ದು. ರೂ. 50,000/-ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ

561

2) 2006-07ನೇ ಸಾಲಿನಲ್ಲಿ ಸಂಪೂರ್ಣ ಗ್ರಾಮೀಣ ಯೋಜನೆಯಡಿ ಸಿಂದಗಿ ತಾಲ್ಲೂಕು ಪಂಚಾಯತದಿಂದ 1237.53 ಕ್ವಿಂಟಾಲ್ ಆಹಾರ ಧಾನ್ಯವನ್ನು(ಮೌಲ್ಯ ರೂ. 7,74,456) ಮತ್ತು ನಗದು ರೂ. 29,26,544ಗಳನ್ನು ಪಡೆದುಕೊಂಡು, ಕಾಮಗಾರಿಗಳನ್ನು ಪೂರ್ಣಗೊಳಿಸಿ ಹಣ ಹಾಗೂ ಆಹಾರ ಧಾನ್ಯವನ್ನು ವಿತರಿಸಿ ಸಕಾಲದಲ್ಲಿ ಲೆಕ್ಕಪತ್ರಗಳನ್ನು ತಯಾರಿಸಿ, ಸಲ್ಲಿಸದೇ ಒಟ್ಟು ಮೌಲ್ಯ ರೂ. 37,00,000/-ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ.

3) 2006-07ನೇ ಸಾಲಿನಲ್ಲಿ ಸಿಂದಗಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಪ್ರವಾಹ/ಅತಿವೃಷ್ಟಿ ಯೋಜನೆಯಡಿ ವಿವಿಧ ಯೋಜನೆಯಡಿ 9 ಕಾಮಗಾರಿಗಳಿಗೆ ರೂ. 15,00,434/-ಗಳನ್ನು ಪಡೆದುಕೊಂಡು, ಕಾಮಗಾರಿಗಳನ್ನು ಅಪೂರ್ಣಗೊಳಿಸಿ ಸೂಕ್ತ ಸಮಯಕ್ಕೆ ದಾಖಲೆಗಳನ್ನು ನೀಡಿರುವುದು,

4) ಜಲಾನಯನ ಅಭಿವೃದ್ಧಿ ಇಲಾಖೆ ಸಿಂದಗಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ವಿವಿಧ ಯೋಜನೆಗಳಡಿ 8 ಕಾಮಗಾರಿಗಳಿಗೆ ಒಟ್ಟು ರೂ. 6,24,679/-ಗಳನ್ನು ಪಡೆದುಕೊಂಡು ಕಳಪೆ ಕಾಮಗಾರಿ ನಿರ್ವಹಿಸಿರುವುದಲ್ಲದೆ ನಿರ್ವಹಿಸಿದ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಿಲ್ಲ.

ಮೇಲ್ಕಂಡ ಆರೋಪಗಳಿಗೆ ಸಂಬಂದಿಸಿದಂತೆ ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಕೈಗೆತ್ತಿಕೊಂಡಿರುತ್ತಾರೆ ಈ ಪ್ರಕರಣದಲ್ಲಿ ಪ್ರಾಶಿಕ್ಯೂಶನ್ ಪರ ಸಾಕ್ಷಿದಾರರಲ್ಲಿ ಒಬ್ಬರಾದ ಶ್ರೀ ಸಜ್ಜನ್, ಇವರು ಸಾಕ್ಷಿ ನೀಡುತ್ತಾ, ಅಪಾದಿತರಾದ ಶ್ರೀ ಬಿ.ಬಿ. ಕೌಲಗಿ, ಇವರು 800 ಮೆಟ್ರಿಕ್ ಟನ್ ಅಕ್ಕಿಯನ್ನು ಸಂಪೂರ್ಣ ಗ್ರಾಮೀಣ ರೋಜಗಾರ ಯೋಜನೆಯಡಿ, ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದಿಂದ ಎತ್ತಿರವುದು ನಿಜ ಎಂದು ಹೇಳಿ ದಾಖಲೆಗಳನ್ನು ಹಾಜರು ಪಡಿಸಿದ್ದಾರೆ. ಅದಲ್ಲದೆ ಸದರಿ ಆಹಾರ ಧಾನ್ಯವನ್ನು ಕಾಮಗಾರಿಗಳಿಗೆ ಉಪಯೋಗಿಸಿದ ಬಗ್ಗೆ ಧಾನ್ಯಗಳನ್ನು ವಿತರಣೆ ಮಾಡಿದ ಬಗ್ಗೆ ಯಾವುದೇ ವಿವರವನ್ನು ಮತ್ತು ಹಣ ಪಾವತಿ ರಶೀದಿಗಳನ್ನು ಆ ಸಂದರ್ಭದಲ್ಲಿ ಅವರು ಹಾಜರುಪಡಿಸಿಲ್ಲವೆಂದು, ವಿಚಾರಣೆಯು ಕ್ಥೊನೆಯ ಹಂತದಲ್ಲಿದ್ದಾಗ ದಿನಾಂಕ: 05-02-2011ರಂದು ಖೊಟ್ಟಿ ದಾಖಲೆಗಳನ್ನುಸೃಷ್ಟಿಸಿ ಹಾಜರು ಪಡಿಸಿರುತ್ತಾರೆಂದು ಸಾಕ್ಷಿ ನೀಡಿರುತ್ತಾರೆ. ಆದರೆ ಆರೋಪಿತ ಅಧಿಕಾರಿಯವರು ಸದರಿ ಆಹಾರ ಧಾನ್ಯಗಳನ್ನು ಯಾವ ರೀತಿ ಎತ್ತುವಳಿ ಮಾಡಿದ್ದಾರೆ. ಯಾವ ದಿನಾಂಕದಂದು ಎತ್ತುವಳಿ ಮಾಡಿದ್ದಾರೆ. ಎನ್ನುವುದನ್ನು ನೋಡಿಲ್ಲವೆಂದು ವಿಚಾರಣಾಧಿಕಾರಿಯವರ ಮುಂದೆ ಸಾಕ್ಷಿ ನೀಡಿದ್ದಾರೆ.

ಪ್ರಕರಣದಲ್ಲಿನ ಮತ್ತೊಬ್ಬ ಸಾಕ್ಷಿದಾರರಾದ ಶ್ರಿ ಬಾಬು ಬಿರಾದಾರ, ಇವರು ಅಪಾದಿತರ ಮೇಲೆ ಮಾಡಿದ ಅಪಾದನೆಗಳು ಬಗ್ಗೆ ತಮಗೆ ಏನೂ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರು ಪಾಟೀ ಸವಾಲಿನಲ್ಲಿ ನಿಪಿ-4ರ ಹೊರತುಪಡಿಸಿ ಇನ್ನಾವುದೇ ದಾಖಲೆಗಳನ್ನು ನೀಡಿಲ್ಲವೆಂದು ವಿಚಾರಣಾಧಿಕಾರಿಯವರು ವಿಚಾರಣೆ ವರದಿಯಲ್ಲಿ ತಿಳಿಸಿರುತ್ತಾರೆ. ಇನ್ನೂ ಮುಂದುವರೆದು, ಅಪಾದಿತರ ಪರ ಸಾಕ್ಷಿದಾರರಾದ ಶ್ರೀ ಈರಣ್ಣ, ಅರಕೇರಿ, ತಮ್ಮ ಸಾಕ್ಷಿಯಲ್ಲಿ, ತಮ್ಮ ಹೊಲದಲ್ಲಿ 2005-06ನೇ ಸಾಲಿನಲ್ಲಿ ತಮ್ಮ ಹೊಲ ಸರ್ವೇ ನಂ. 129 ಮೊರಟಗಿ ಗ್ರಾಮ ಸಿಂದಗಿ ತಾ: ವ್ಯಾಪ್ತಿಯಲ್ಲಿ ಬರುವುದಾಗಿ ತಮ್ಮ ಹೊಲದಲ್ಲಿ ಕಾಮಗಾರಿಗಳನ್ನು ಕೈಗೊಂಡಿರುತ್ತಾರೆಂದು ಸಷ್ಟವಾಗಿ ನುಡಿದಿರುತ್ತಾರೆ. ಅದಲ್ಲದೇ ಸದರಿ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಿದಾಗ ಮುಖ್ಯ ವಿಚಾರಣೆಯಲ್ಲಿ ಹೇಳಿದ ಯಾವ ಸಂಗತಿಯನ್ನು ಬದಲಿಸಲು ಸಾದ್ಯವಾಗಲಿಲ್ಲ. ಆರೋಪಿತ ಪರ ಸಾಕ್ಷಿದಾರರು ಸುಳ್ಳು ಹೇಳಿದ್ದಾರೆ ಎನ್ನುವುದನ್ನು ರುಜುವಾತುಪಡಿಸಲು ಮಂಡನಾಧಿಕಾರಿಯವರು ಯಾವ ಪ್ರಶ್ನೆಗಳು ಕೇಳದೇ ಇದ್ದುದರಿಂದ ಅಪಾದಿತರ ಪರವಾಗಿ ಸಾಕ್ಷಿ ನೀಡಿದ ಸಾಕ್ಷವನ್ನು ನಂಬಲು ಯೋಗ್ಯವೆಂದು ವಿಚಾರಣಾಧಿಕಾರಿಗಳು ಅಭಿಪ್ರಾಯ ಪಟ್ಟಿರುತ್ತಾರೆ ಮತ್ತು ಸರ್ಕಾರದ ಪರವಾಗಿ ಸಾಕ್ಷಿ ನೀಡಿದ ಸಾಕ್ಷಿದಾರರು ಹೇಳಿಕೆಗಳು ಅವರ ಮೇಲಿನ ಆರೋಪವನ್ನು ಪುಷ್ಟಿಕರಿಸುವುದಕ್ಕೆ ಸಹಾಯಕವಾಗಲಿಲ್ಲ. ಅದಲ್ಲದೇ ಈ ಪ್ರಕರಣದಲ್ಲಿ ಮೊದಲನೆ ಸಾಕ್ಷಿದಾರರಾದ ಶ್ರೀ ವಾಮದೇವ ಗಾಜರೆ, ಅಂದಿನ ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ದಿ ಇಲಾಖೆ, ಅವರು ತಮ್ಮ ಸಾಕ್ಷಿಗೆ ಅನುಗುಣವಾಗಿ ನುಡಿದ್ದಾರೆ. ಆದರೆ ಶಿಸ್ತು ಪ್ರಾಧಿಕಾರಿಯವರು ಆರೋಪಿತ ಅಧಿಕಾರಿಯವರ ವಿವರಣೆಗೆ ವ್ಯತ್ತಿರಿಕ್ತವಾದ ಯಾವ ಸಾಕ್ಷಾಧಾರವನ್ನು ಈ ಪ್ರಕರಣದಲ್ಲಿ ಮಂಡಿಸಿರುವುದಿಲ್ಲ. ಅದಲ್ಲದೇ ಪ್ರಾಶಿಕ್ಯೂಶನ್ ಸಾಕ್ಷಿ-1 ಇವರು ಕಾಮಗಾರಿಗಳ ತಪಾಸಣೆ ಮಾಡುವಾಗ ಆರೋಪಿತ ಅಧಿಕಾರಿಯವರು ಇರಲಿಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತದೆಂದು ವಿಚಾರಣಾಧಿಕಾರಿಯವರು ಹೇಳಿದ್ದಾರೆ. ಆರೋಪಿತ ಅಧಿಕಾರಿಯವರು ತಮ್ಮ ಮೇಲಿರುವ ಆರೋಪವನ್ನು ತಳ್ಳಿ ಹಾಕಿದ್ದು, ತಾವು ಕೈಗೊಂಡಿರುವ 9 ಕಾಮಗಾರಿಗಳ ಬಗ್ಗೆ ಸಾಕ್ಷದಾರರೊಂದಿಗೆ ವಿವರಣೆ ಸಲ್ಲಿಸಿದ್ದಾಗಿ ಪಾಟೀ ಸವಾಲಿನಲ್ಲಿ ಅಪಾದಿತರ ಹೇಳಿಕೆಯಲ್ಲಿ ಹಾಗೂ ಪ್ರಾಶಿಕ್ಯೂಶನ ಸಾಕ್ಷಿದಾರರ ಹೇಳಿಕೆಗಳನ್ನು ಪರಿಶೀಲಿಸಿದ ನಂತರ ಸದರಿಯವರ ಮೇಲಿರುವ ಆರೋಪಗಳು ಸಾಬಿತುಗಿರುವುದಿಲ್ಲವೆಂದು ವಿಚಾರಣಾಧಿಕಾರಿಯವರು ಅಭಿಪ್ರಾಯ ನೀಡಿರುತ್ತಾರೆ.

559

ಮೇಲ್ಕಂಡಂತೆ ವರದಿ ನೀಡಿದ ವಿಚಾರಣಾಧಿಕಾರಿಯವರು, ಸದರಿಯವರ ಮೇಲಿನ ಆಪಾದನೆಗಳು ಸಾಬೀತಾಗಿರವುದಿಲ್ಲವೆಂದು ವರದಿ ನೀಡಿರುವುದರಿಂದ, ವಿಚಾರಣಾಧಿಕಾರಿಯವರ ಸದರಿ ವರದಿಯನ್ನು ಪರಿಶೀಲಿಸಿದ ಸರ್ಕಾರ ವಿಚಾರಣಾಧಿಕಾರಿಯವರ ಅಭಿಪ್ರಾಯವನ್ನು ಒಪ್ಪಿ, ಶ್ರೀ ಬಿ.ಬಿ. ಕೌಲಗಿ, ಹಿಂದಿನ ಸಹಾಯಕ ಕೃಷಿ ಅಧಿಕಾರಿ, ಇವರು, ಜಲಾನಯನ ಅಭಿವೃದ್ಧಿ ಇಲಾಖೆ, ಸಿಂದಗಿ–ಬಿಜಾಪೂರ ಜಿಲ್ಲೆ ಇವರನ್ನು ಅವರ ಮೇಲಿನ ಆರೋಪದಿಂದ ಮುಕ್ತಗೊಳಿಸಲು ತಿರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

<u>ಸರ್ಕಾರದ ಆದೇಶ ಸಂ. ಕೃತೋಇ 25 ಕೃಪವಿ 2008</u>

<u>ಬೆಂಗಳೂರು, ದಿನಾಂಕ: 26 ನೇ ಜೂನ್ 2012.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ ಬಿ.ಬಿ. ಕೌಲಗಿ ಹಿಂದಿನ ಸಹಾಯಕ ಕೃಷಿ ಅದಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ ಸಿಂದಗಿ– ಬಿಜಾಪೂರ ಜಿಲ್ಲೆ (ಹಾಲಿ ನಿವೃತ್ತ ) ಇವರನ್ನು ಅವರ ಮೇಲಿನ ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:–

1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) ಕರ್ನಾಟಕ ಬೆಂಗಳೂರು.
2) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
3) ಆಯುಕ್ತರು ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4) ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಬಿಜಾಪೂರ
5) ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ವಿಜಾಪೂರ
6) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳಳರು.
7) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ ಅವರ ಆಪ್ತ ಕಾರ್ಯದರ್ಶಿಯವರಿಗೆ,
8) ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ, ಅವರ ಆಪ್ತ ಸಹಾಯಕರಿಗೆ.
9) ಸಂಬಂಧಪಟ್ಟ ಅಧಿಕಾರಿಯವರಿಗೆ (ಜಲಾನಯನ ಅಭಿವೃದ್ಧಿ ಆಯುಕ್ತರ ಮೂಲಕ)
10) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.